**ರಾಜ್ಯದ ರೇಷ್ಮೆ ಗೂಡಿನ ಬಿತ್ತನೆ ವಲಯಗಳನ್ನು ಬೇರೆ ಕಡೆಗೆ ಮಾಡುವ ಬಗ್ಗೆ**

753. ಶ್ರೀ ಬಿ. ರಾಜುಗೌಡ (ಹನೂರು) :– ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರೇಷ್ಮೆ ಗೂಡಿನ ಬಿತ್ತನೆ ವಲಯವನ್ನು ಒಂದೇ ಕಡೆ ಮಾಡುವ ಬದಲು ರಾಜ್ಯದ ನಾಲ್ಕಾರು ಕಡೆ ಮಾಡಲು ಸರ್ಕಾರ ಉದ್ದೇಶಿಸಿರುವುದೇ?
ಆ) ಹಾಗಿದ್ದಲ್ಲಿ ಯಾವ ಯಾವ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಮಾಡಲು ನಿಶ್ಚಯಿಸಿರುವುದು?
ಇ) ಪ್ರಯೋಗಾರ್ಥವಾಗಿ ಎಲ್ಲಾದರೂ ಬಿತ್ತನೆ ಗೂಡನ್ನು ಬೆಳೆಯಲಾಗುತ್ತಿದೆಯೆ?
ಈ) ಕಲುಷಿತಗೊಂಡ ಬಿತ್ತನೆ ವಲಯವನ್ನು ಬದಲಾವಣೆ ಮಾಡುವುದರಿಂದ ರೇಷ್ಮೆ ಹುಳುವಿಗೆ ತಗಲುವ ಎಲ್ಲಾ ರೋಗಗಳನ್ನು ನಿಯಂತ್ರಿಸಲು ಅನುಕೂಲವಾಗುವುದಿಲ್ಲವೆ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು) –

ಅ) ಪರಿಶೀಲನೆಯಲ್ಲಿದೆ
ಆ) ಪರಿಶೀಲನೆಯಲ್ಲಿದೆ.
ಇ) ಪಿ2 ಬಿತ್ತನೆ ಗೂಡಿನ ಉತ್ಪನ್ನವನ್ನು ಕೊಳ್ಳೇಗಾಲ ತಾಲ್ಲೂಕಿನ ಹೂಗ್ಯದಲ್ಲಿ ಪ್ರಯೋಗಾರ್ಥವಾಗಿ ಕೈಗೊಳ್ಳಲಾಗಿದೆ.
ಈ) ಬಿತ್ತನೆ ವಲಯದಲ್ಲಿ ರೋಗಗಳನ್ನು ನಿಯಂತ್ರಿಸಲು ಮತ್ತು ತಡೆಗಟ್ಟಲು ಸೂಕ್ತ ವ್ಯವಸ್ಥೆ ಮಾಡಲಾಗಿದೆ. ಹೆಚ್ಚುವರಿ ಬಿತ್ತನೆ ವಲಯದ ಬಗ್ಗೆ ತಾಂತ್ರಿಕವಾಗಿ ಪರಿಶೀಲಿಸಲಾಗುತ್ತಿದೆ.

**ಗರ್ಭಧಾರಣೆ ತಡೆಯುವುದರ ಬಗ್ಗೆ**

757. ಶ್ರೀ ಜಿ. ರಾಜುಗೌಡ (ಹನೂರು) : – ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಗರ್ಭಧಾರಣೆ ತಡೆಯಲ್ಲಿಕ್ಕೆ ಚುಚ್ಚುಮದ್ದು ಭಾರತದಲ್ಲಿ ಸಿದ್ಧವಾಗಿದೆಯೇ;
ಆ) ಇದ್ದಲ್ಲಿ ಇದರ ಹೆಸರೇನು;
ಇ) ಸಿದ್ಧವಾಗಿದ್ದರೆ ಟುಬೆಕ್ಟಮಿ ಆಪರೇಷನ್ ಬದಲು ಇದನ್ನು ಏಕೆ ಉಪಯೋಗಿಸಬಾರದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಇಲ್ಲ
ಆ) ಪ್ರಶ್ನೆ ಉದ್ಭವಿಸುವುದಿಲ್ಲ.
ಇ) ಉದ್ಭವಿಸುವುದಿಲ್ಲ.

**ದೇವದಾಸಿಯರ ಸಂಖ್ಯೆ ಹಾಗೂ ಪುನರ್ ವಸತಿ.**

766. ಶ್ರೀ ಬಸವರಾಜರಾಯರೆಡ್ಡಿ (ಯುಲ್ಬುರ್ಗ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದಲ್ಲಿ ಗುರುತಿಸಲಾಗಿರುವ ದೇವದಾಸಿಯರ ಸಂಖ್ಯೆ (ಜಿಲ್ಲಾವಾರು ಮಾಹಿತಿಯನ್ನು ಸಲ್ಲಿಸಲು ತಿಳಿಸಲಾಗಿದೆ)?

ಅ) ದೇವದಾಸಿಯರ ಪುನರ್ವಸತಿಗಾಗಿ ರೂಪಿಸಲಾಗಿರುವ ಕಾರ್ಯಕ್ರಮಗಳು ;
ಇ) ದೇವದಾಸಿ ಪದ್ಧತಿಯನ್ನು ತಡೆಗಟ್ಟಲು ಈ ಸರ್ಕಾರವು ತೆಗೆದುಕೊಂಡಿರುವ ಸೂಕ್ತ ಕಾರ್ಯಕ್ರಮಗಳು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) –

ಅ) 21,856

ಜಿಲ್ಲೆಗಳ ವಿವರ :

| | |
|---|---|
| 1) ಬಿಜಾಪುರ | 4,895 |
| 2) ಧಾರವಾಡ | 2,503 |
| 3) ಬಳ್ಳಾರಿ | 1,635 |
| 4) ರಾಯಚೂರು | 7,374 |
| 5) ಬೆಳಗಾಂ | 3,737 |
| 6) ಗುಲ್ಬರ್ಗ | 690 |
| 7) ಕೋಲಾರ | 77 |
| 8) ಚಿತ್ರದುರ್ಗ | 915 |
| 9) ಬೀದರ್ | 30 |

ಆ) ದೇವದಾಸಿಯರ ಪುನರ್ ವಸತಿಗಾಗಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ : ವರ್ಗಗಳ ಅಭಿವೃದ್ಧಿ ನಿಗಮವು ವಿವಿಧ ಶಾಖೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಕೈಗೊಂಡಿರುವುದಲ್ಲದೆ, ದೇವದಾಸಿಯರ ವಿವಾಹ, ಜನ ಜಾಗೃತಿ ಉಂಟು ಮಾಡಲು ಜಾಗೃತಾ ಶಿಬಿರ, ಕೈ ಮಗ್ಗ ನೇಯ್ಗೆ ತರಬೇತಿ ಮತ್ತು ಉತ್ಪಾದನಾ ಕೇಂದ್ರ ದೇವದಾಸಿಯರ ಮಕ್ಕಳಿಗೆ ಶೈಕ್ಷಣಿಕ ಕಾರ್ಯಕ್ರಮ ಮತ್ತು ಆರೋಗ್ಯ ಶಿಬಿರ ಇತ್ಯಾದಿಗಳನ್ನು ಏರ್ಪಡಿಸಲಾಗಿದೆ.

ಇ) 1) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಒಂದು ವಿಶೇಷ ಘಟಕ ಮತ್ತು ರಾಯಚೂರು ಹಾಗೂ ಬೆಳಗಾಂಗಳಲ್ಲಿ 2 ಚಿಕ್ಕ ಘಟಕಗಳನ್ನು ಸ್ಥಾಪಿಸಲಾಗಿದೆ.

2) ಕರ್ನಾಟಕ ರಾಜ್ಯ ದೇವದಾಸಿ (ಸಮರ್ಪಣ ನಿಷೇಧ) ಕಾನೂನು 82ರಲ್ಲಿ ರಚಿಸಲಾಗಿದೆ.

3) ಸೌಂದತ್ತಿಯಲ್ಲಿ ಒಂದು ಬಾಲ ಮಂದಿರವನ್ನು ಅಥಣಿಯಲ್ಲಿ ಒಂದು ರಾಜ್ಯ ನಿಲಯವನ್ನು ಸ್ಥಾಪಿಸಿ ದೇವದಾಸಿಯರಿಗೆ ಶಿಕ್ಷಣ, ವೃತ್ತಿ ತರಬೇತಿ ಮತ್ತು ಪುನರ್ ವಸತಿ ಇತ್ಯಾದಿಗಳನ್ನು ಒದಗಿಸಲಾಗುತ್ತಿದೆ.

4) ದೇವದಾಸಿಯರನ್ನು ಮದುವೆಯಾಗುವವರಿಗೆ ರೂ.3,000–00 ಗಳ ಸಹಾಯಧನ.

5) ಇವುಗಳಲ್ಲದೆ ಇನ್ನೂ ಅನೇಕ ಕಾರ್ಯಕ್ರಮಗಳನ್ನು ಕರ್ನಾಟಕ ರಾಜ್ಯ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ : ವರ್ಗಗಳ ಅಭಿವೃದ್ಧಿ ನಿಗಮಗಳು ಹಾಕಿಕೊಂಡಿರುತ್ತವೆ.

## ಹೊಸ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸುವುದು.

765. ಶ್ರೀ ಬಸವರಾಜರಾಯರೆಡ್ಡಿ (ಯಲ್ಬುರ್ಗ) :– ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

1. ಪ್ರಸ್ತುತ ಸಾಲಿನಲ್ಲಿ ಸರ್ಕಾರವು ಯಾವುದಾದರೂ ಹೊಸ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸಿದೆಯೇ?